**ಪ್ರಧಾನ  ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಕುಮಟಾ.**

ಸಿ ಸಿ ನಂ.557/2023

ಅರುಣ ಹನುಮಂತ ನಾಯ್ಕ ..... ಫಿರ್ಯಾದಿ

ವಿರುದ್ಧ

ವಿಶ್ವಜೀತ ಕಮಲಾಕರ ನಾಯಕ ...... ಆರೋಪಿ

ಆರೋಪಿಯ ಹೆಸರು - ವಿಶ್ವಜೀತ ಕಮಲಾಕರ ನಾಯಕ

ವಯಸ್ಸು - ಸುಮಾರು ವರ್ಷ

ವಾಸ್ತವ್ಯ - ವನ್ನಳ್ಳಿ, ಕುಮಟಾ.

**ದಿನಾಂಕಃ 19.8.2023**

**ಆರೋಪಣೆ**

ಆರೋಪಿಯಾದ ನೀವು ಫಿರ್ಯಾದಿಯವರಿಂದ ದಿಃ 3.3.2021 ರಂದು ರೂ.10,00,000/- ಹಣವನ್ನು ಕೈಗಡವಾಗಿ ಪಡೆದುಕೊಂಡಿದ್ದು, ಸದರಿ ಹಣದ ಮರುಪಾವತಿಗಾಗಿ ಕರ್ನಾಟಕ ಬ್ಯಾಂಕ್, ಬಬ್ರುವಾಡಾ ಶಾಖೆಯ ಚೆಕ್ ನಂಃ 171803 ನೇದನ್ನು ದಿನಾಂಕಃ 16.1.2023 ರಂದು ರೂ.10,00,000/- ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿಯು ಸದ್ರಿ ಚೆಕನ್ನು ನಗದೀಕರಣಕ್ಕಾಗಿ ತಮ್ಮ ಖಾತೆ ಇರುವ ಬ್ಯಾಂಕಗೆ ಹಾಜರುಪಡಿಸಿದಾಗ ಬ್ಯಾಂಕಿನವರು Kindly contact Drawer Drawee Bank and Please present again ಅಂತಾ ತಿಳಿಸಿ ಹಿಂಬರಹದೊಂದಿಗೆ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ದಿನಾಂಕ 9.2.2023 ರಂದು ತಮ್ಮ ವಕೀಲರ ಮೂಲಕ ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ಸ್ವೀಕರಿಸಿಯೂ, ಉತ್ತರವನ್ನು ನೀಡದೇ ಹಾಗೂ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈಗ ನಿಮಗೆ ಮೇಲೆ ಓದಿ ಹೇಳಿದ ಆರೋಪಣೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೂಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.

sd/-

**ಪ್ರಧಾನ ಪ್ರ.ದ.ನ್ಯಾ ದಂಡಾಧಿಕಾರಿ,**

**ಕುಮಟಾ.**